ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ. ಆದಾಗ್ಯೂ ರೈತರ ಬೇಡಿಕೆ ಬಂದಾಗ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ತಾಂತ್ರಿಕ ಸಲಹೆ, ಹಾಗೂ ಶೇಕಡ 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಒದಗಿಸಲಾಗುತ್ತದೆ. ಈ ಬಗ್ಗೆ ಹೆಚ್ಚಿನ ವಿಷಯ ಸಾಂಬಾರು ಮಂಡಳಿಯಿಂದ ಪಡೆಯಬಹುದಾಗಿರುತ್ತದೆ.

ಆ) ಈ ವಿಷಯವು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಇ) ಈ ವಿಷಯವು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುತ್ತದೆ.

ವಿಷಯ: ಆಶ್ರಯ ಯೋಜನೆಯಡಿಯಲ್ಲಿ ಸ್ವಂತ ಮನೆ ನಿರ್ಮಾಣ.

2649 (3628)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿವೇಶನ ನೀಡಿ ಆಶ್ರಯ ಯೋಜನೆಯಡಿಯಲ್ಲಿ ಸ್ವಂತ ಮನೆ ಕಟ್ಟುವ ಕೆಲಸ ಎಷ್ಟು ಕ್ಷೇತ್ರಗಳಲ್ಲಿ ಪ್ರಾರಂಭವಾಗಿದೆ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ:ಹೆಚ್ಯುಡಿ 1 ಹೆಚ್ಎಹೆಚ್ 95 (2) ದಿನಾಂಕ 18-8-95ರ ಪ್ರಕಾರ ಫಲಾನುಭವಿಗಳೇ ಮನೆಗಳನ್ನು ಸ್ವಂತ ನಿರ್ಮಿಸಬೇಕಾಗುತ್ತದೆ.

ಈ ನೀತಿಯ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿ 95-96, 96-97 ಮತ್ತು 97-98ನೇ ಸಾಲಿನಲ್ಲಿ ಫಲಾನುಭವಿಗಳೇ ಸ್ವಂತ ಮನೆ ಕಟ್ಟುವ ಕೆಲಸ ಎಲ್ಲಾ ಕಡೆ ನಡೆಯುತ್ತಿದೆ. (ಫಲಾನುಭವಿಗಳು ಮನೆ ಕಟ್ಟದೆ ಕಂಟ್ರಾಕ್ಟರುಗಳು ಮನೆ ಕಟ್ಟುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ)

ವಿಷಯ: ನರಸಿಂಹರಾಜ ಕ್ಷೇತ್ರ ವ್ಯಾಪ್ತಿ ನಗರಪಾಲಿಕೆಯ ಆಶ್ರಯ ಯೋಜನೆ ಮನೆಗಳ ವಿತರಣೆಯಲ್ಲಿ ಅವ್ಯವಹಾರ

2650 (3204)

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರ ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ನಗರಪಾಲಿಕೆ ಆಶ್ರಯ